ಮೇಲಿನ ಕಾಮಗಾರಿಗಳ ಪೈಕಿ ಆರ್ಟ್‌ಗ್ಯಾಲರಿ ಹಾಗೂ ಮ್ಯುಜಿಯಂ ಕಟ್ಟಡಕ್ಕೆ ಕೇಂದ್ರ ಸರ್ಕಾರದಿಂದ ರೂಪಾಯಿ 50,00,000 ಅನುದಾನ ಬಿಡುಗಡೆಯಾಗಿದ್ದು ಅದರಲ್ಲಿ ಮಹಾನಗರ ಪಾಲಿಕೆ ಅನುದಾನ ಸೇರಿ ಸದರಿ ಕಟ್ಟಡ ಕಟ್ಟಲು ಈವರೆಗೆ ರೂಪಾಯಿ 99,46,200/–ಮೊತ್ತದ ಕಾಮಗಾರಿ ಮಾಡಲಾಗಿದೆ. ಕಟ್ಟಡ ಮುಕ್ತಾಯ ಹಂತದಲ್ಲಿದೆ.

ಸದರಿ ಯೋಜನೆಯಲ್ಲಿ ರಂಗಮಂದಿರದ ಮುಖ್ಯ ಕಟ್ಟಡ ನಿರ್ಮಿಸಲು ಅನುದಾನದ ಅವಶ್ಯಕತೆ ಇದ್ದು ಈ ಬಗ್ಗೆ ಅನುದಾನ ಕೋರಿ ಶೀಘ್ರದಲ್ಲಿಯೇ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಆ) ರಂಗ ಮಂದಿರ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.

ಇ) ಅನುದಾನ ದೊರಕಿದ ನಂತರ ತೀವ್ರಗತಿಯಲ್ಲಿ ಕಟ್ಟಡ ಪೂರ್ಣಗೊಳಿಸಲಾಗುವುದು. ಇದಕ್ಕೆ ತಗಲುವ ಅಂದಾಕು ವೆಚ್ಚ ಸುಮಾರು ರೂ. 200 ಲಕ್ಷಗಳು.

5376(5425) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಸದಾಶಿವನಗರದ ಬಳಿ ಇರುವ ಸ್ಯಾಂಕಿ ಕೆರೆ ಆಧುನಿಕರಣಕ್ಕೆ ಮಂಜೂರು ಮಾಡಿದ್ದ ಹಣ ಎಷ್ಟು;

ಆ) ಈ ಹಣದಿಂದ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳು ಯಾವುವು; ಅವುಗಳ ವೆಚ್ಚ ಎಷ್ಟು; (ಕಾಮಗಾರಿವಾರು ಮಾಹಿತಿ ನೀಡಿ);

ಇ) ಕಾಮಗಾರಿ ಪೂರ್ಣಗೊಂಡಿದ್ದು ಯಾವಾಗ; ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು ಯಾರು;

ಈ) ಈಗ ಪುನಃ ಕೆರೆಯಲ್ಲಿ ಕಾಮಗಾರಿ ಕೈಗೆತ್ತಿಕೊಂಡಿರುವುದು ನಿಜವೇ; ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು; ಇದರ ವೆಚ್ಚ ಎಷ್ಟು;

ಉ) ಕಾಮಗಾರಿಗೆ ಟೆಂಡರ್ ಕರೆಯಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಸ್ಯಾಂಕಿ ಕೆರೆ ಜೀರ್ಣೋದ್ಧಾರ ಕಾಮಗಾರಿಗಾಗಿ ರೂ. 400.00 ಲಕ್ಷಗಳ ಅಂದಾಜಿನಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ.

ಆ) ಕೆರೆಯ ಪುನಶ್ಚೇತನ ಕಾಮಗಾರಿಗಾಗಿ ಒಟ್ಟು 400.00 ಲಕ್ಷಗಳಿಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಅದರಂತೆ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಒಟ್ಟು ಕಾಮಗಾರಿಗೆ ರೂ. 360.50 ಲಕ್ಷಗಳು ವೆಚ್ಚವಾಗಿದೆ.

1. ಕೆರೆಯಲ್ಲಿದ್ದ ಹೂಳನ್ನು ತೆಗೆಯಲಾಗಿದೆ.

2. ಕೆರೆಯ ಸುತ್ತಲು 1.60 ಕಿ.ಮೀ. ಉದ್ದಕ್ಕೆ ಏರಿಯನ್ನು ನಿರ್ಮಿಸಿ ಕಲ್ಲಿನ ರಿವೆಟ್‌ಮೆಂಟ್ ಮಾಡಲಾಗಿದೆ.

3. ಕೆರೆಯಲ್ಲಿ ಗಣೇಶ ವಿಸರ್ಜನೆಗಾಗಿ ಪ್ರತ್ಯೇಕ ಕೊಳವನ್ನು ನಿರ್ಮಿಸಲಾಗಿದೆ.

4. ಕೆರೆಯಲ್ಲಿ ಬೋಟಿಂಗ್ ಚೆಟ್ಟಿಯನ್ನು ನಿರ್ಮಿಸಲಾಗಿದೆ.

5. ಕೆರೆಗೆ ಕೋಡಿಯನ್ನು ನಿರ್ಮಿಸಲಾಗಿದೆ.

6. ಕೆರೆಯಲ್ಲಿ ಕೋಡಿ ನೀರು ಸರಾಗವಾಗಿ ಹರಿದು ಮೋರಿ ಸೇರಲು ಆರ್.ಸಿ.ಸಿ. ಬಾಕ್ಸ್ ಮಾದರಿಯ ಮೋರಿಯನ್ನು 207.00 ಮೀ. ಉದ್ದಕ್ಕೆ ನಿರ್ಮಿಸಲಾಗಿದೆ.

7. ಕೆರೆಯ ಸುತ್ತಲು ಪಾದಚಾರಿ ಮಾರ್ಗಕ್ಕಾಗಿ ಕಾಬಲ್ ಸ್ಟೋನ್ ಹಾಕಲಾಗಿದೆ

8. ಕೆರೆಯ ಸುತ್ತಲೂ ಪಾದಚಾರಿ ಮಾರ್ಗಕ್ಕೆ ವಿದ್ಯುತ್ತೀಕರಣ ಸೌಲಭ್ಯ ಕಲ್ಪಿಸಲಾಗಿದೆ.

9. ಕೆರೆಯಲ್ಲಿ ಅಲಂಕಾರಿ ಗ್ರಿಲ್ ಕೆರೆಯ ಏರಿಯ ಸುತ್ತಲೂ ನಿರ್ಮಿಸಲಾಗಿದೆ

10. ಕೆರೆಯಲ್ಲಿ ಪೈಪ್ ಕಲ್ವರ್ಟ್ ಹಾಗೂ ಅಲಕಾರಿಕ ಕೇಬಲ್ ಸೇತುವೆಯನ್ನು ನಿರ್ಮಿಸಲಾಗಿದೆ.

11. ವಾಹನಗಳ ನಿಲುಗಡೆಗೆ 400.00 ಮೀ. ಉದ್ದಕ್ಕೆ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಲಾಗಿದೆ.

12. ಕೆರೆಯಲ್ಲಿ ಒಳ ಹರಿವಿನ ಮೋರಿಗಳನ್ನು ಜೋಡಿಸಲು ಕಾಲುವೆಯನ್ನು ನಿರ್ಮಿಸಲಾಗಿದೆ.

13. ಕೆರೆಯಲ್ಲಿ ಒಳ ಹರಿವಿನ ಮೋರಿಯಲ್ಲಿ ಬರುವ ಹೂಳನ್ನು ತಡೆಯಲಿ ಸಿಲ್ ಟ್ರಾಪ್‌ನ್ನು ನಿರ್ಮಿಸಲಾಗಿದೆ.

14. ಕೆರೆಯಲ್ಲಿ ಏರಿಗೆ ಕೆಲವಡೆ ಆರ್.ಸಿ.ಸಿ. ಹಾಗೂ ಕಲ್ಲಿನ ಕಟ್ಟಡದ ಆಸರೆಗೋಡೆಯನ್ನು ನಿರ್ಮಿಸಲಾಗಿದೆ.

15. ಕೆರೆಯಲ್ಲಿ ಶ್ರದ್ಧಾಕರ್ಮ ಮಾಡಲು ಪ್ರತ್ಯೇಕ ಕೊಳವನ್ನು ನಿರ್ಮಿಸಲಾಗಿದೆ.

16. ಕೆರೆಯ ಪಕ್ಕದಲ್ಲಿರುವ ರಸ್ತೆಗಳ ಪಾದಚಾರಿ ಮಾರ್ಗ ಅಭಿವೃದ್ಧಿಪಡಿಸಲಾಗಿದೆ.

ಇ) ಸ್ಯಾಂಕಿ ಕೆರೆಯ ಜೋರ್ಣೋದ್ಧಾರ ಕಾಮಗಾರಿಯನ್ನು ದಿನಾಂಕ 26.1.2003 ರಂದು ಪ್ರಾರಂಭಿಸಿ, ದಿನಾಂಕ 30.11.2003 ರಂದು ಪೂರ್ಣಗೊಳಿಸಲಾಗಿದೆ ಹಾಗೂ ದಿನಾಂಕ 31.1.2004 ರಂದು ಸಾರ್ವಜನಿಕ ಉಪಯೋಗಕ್ಕೆ ಸಮರ್ಪಣೆ ಮಾಡಲಾಗಿದೆ. ಈ ಕಾಮಗಾರಿಯನ್ನು ಮೆ: ಶ್ಯಾಮರಾಜು ಮತ್ತು ಕಂಪನಿಯವರು ನಿರ್ವಹಿಸಿರುತ್ತಾರೆ.

ಈ) ಈಗ ಪುನಃ ಕೆರೆಯಲ್ಲಿ ಹೆಚ್ಚುವರಿ ಜಲ ಸಂಗ್ರಹ ಮಾಡಲು ಹಾಗೂ ಪಾದಚಾರಿ ಮಾರ್ಗವು ಇಕ್ಕಟ್ಟಾಗಿದ್ದರಿಂದ ಸಾರ್ವಜನಿಕರು ಕೋರಿದಂತೆ ಹಾಲಿ ಇರುವ ಅಗಲಕ್ಕಿಂತ ಎರಡು ಪಟ್ಟು ಅಗಲ ಮಾಡಲು ಉದ್ದೇಶಿಸಿ ಅದರಂತೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ. ಹೆಚ್ಚುವರಿ ಜಲಸಂಗ್ರಹ ಕಾಮಗಾರಿಯನ್ನು ರೂ. 39.00 ಲಕ್ಷಗಳ ಅಂದಾಜು ಮಾಡಲಾಗಿದ್ದು, ಈ ಕಾಮಗಾರಿಗಳನ್ನು ಮಳೆಗಾಲ ಪ್ರಾರಂಭವಾಗುವ ಮುಂಚೆ ಮಾಡಬೇಕಾದ್ದರಿಂದ ಹಾಗೂ ಕೆರೆಯಲ್ಲಿ ಹೆಚ್ಚುವರಿ ನೀರು ತುಂಬಿಕೊಂಡರೆ ಕಾಮಗಾರಿ ನಿರ್ವಹಿಸುವುದು ಸಾಧ್ಯವಿರುವುದಿಲ್ಲ ಎಂದು ಮನಗಂಡು ತುಂಡು ಗುತ್ತಿಗೆಯ ಆಧಾರದ ಮೇಲೆ ಸುತ್ತಲೂ 1.0 ಮೀ. ಎತ್ತರಕ್ಕೆ ಏರಿಯನ್ನು ನಿರ್ಮಿಸುವುದು ಹಾಗೂ ರಿವೆಟ್‌ಮೆಂಟ್ ಮಾಡುವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಮುಂದುವರೆದು,

1. ಕೆರೆಯಲ್ಲಿ ವಿದ್ಯುತ್ ದೀಪಗಳನ್ನು, ಕೇಬಲ್‌ಗಳನ್ನು ಹಾಗೂ ಹಾಕಿರುವ ಗಿಲ್‌ಗಳನ್ನು ತೆಗೆದು ಹಾಕಿ ಪುನಃ ಮರು ನಿರ್ಮಾಣ ಮಾಡುವುದು.

2. ಕೆರೆಯಲ್ಲಿ ಆಸರೆ ಗೋಡೆಯನ್ನು ನಿರ್ಮಿಸುವುದು.

3. ಕೆರೆಯ ಸುತ್ತಲು ಪಾದಚಾರಿ ಮಾರ್ಗ ನಿರ್ಮಾಣ ಮಾಡುವುದು ಹಾಗೂ ಇತರ ಕಾಮಗಾರಿಗಳಿಗೆ ರೂ. 99.00 ಲಕ್ಷಗಳ ಟೆಂಡರ್ ಕರೆಯಲಾಗಿದೆ.

ಉ) ಈ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ತೆಗೆದುಕೊಳ್ಳಲು, ಟೆಂಡರು ಪ್ರಕ್ರಿಯೆ ವಿಳಂಬವಾಗುವುದರಿಂದ ಮತ್ತು ಕೆರೆಯ ಏರಿಯನ್ನು ಎತ್ತರಿಸುವ ಕಾಮಗಾರಿಯನ್ನು ಮಳೆಗಾಲ ಪ್ರಾರಂಭವಾಗುವ ಮುಂಚೆ ಹಾಗೂ ಕರೆಯಲ್ಲಿ ಹೆಚ್ಚುವರಿ ಜಲ ಸಂಗ್ರಹವಾಗುವ ಮುಂಚೆಯೇ ಮಾಡಬೇಕಾಗಿದ್ದುದ್ದರಿಂದ ಈ ಕಾಮಗಾರಿಯನ್ನು ಏಪ್ರಿಲ್ ತಿಂಗಳಲ್ಲಿ ಪ್ರಾರಂಭ ಮಾಡಿ ಕಾಮಗಾರಿಗಳನ್ನು ಸುರಕ್ಷಿತ ಮಟ್ಟಕ್ಕೆ ತರಲಾಗಿದೆ. ಇಲ್ಲವಾದಲ್ಲಿ ಮಳೆಯಿಂದ ಕೆರೆಯಲ್ಲಿ ನೀರು ತುಂಬಿಕೊಂಡು ಹಲವಾರು ಕಡೆ ಉದ್ಯಾನವನ ಜಲಮಯವಾಗುವ ಸಂಭವವಿರುತ್ತದೆ. ಆದ್ದರಿಂದ, ಈ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ತೆಗೆದು ಕೊಳ್ಳಲಾಗಿದೆ. ಬಾಕಿ ಕಾಮಗಾರಿಗಳನ್ನು ಟೆಂಡರ್ ಮೂಲಕ ತೆಗೆದುಕೊಳ್ಳಲಾಗುವುದು.

5377(5426) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರವು ಸೇರಿದಂತೆ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಸರ್ಕಾರದ ಅಧೀನದ ಚಿತ್ರಮಂದಿರಗಳಿವೆ;

ಆ) ಇವುಗಳ ಅಭಿವೃದ್ಧಿ ನಿರ್ವಹಣೆಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ;

ಇ) ಇದಲ್ಲದೆ ಚಿತ್ರೀಕರಣ ಘಟಕಗಳು ಸ್ಟುಡಿಯೋ (ಕಂಠೀರವ, ಸಂಕೇತ್, ಇತ್ಯಾದಿ) ಬಗ್ಗೆ ಸರ್ಕಾರದ ನಿಲುವು ಏನು;

ಈ) ಬೆಂಗಳೂರು ನಗರದಲ್ಲಿರುವ ಪುಟ್ಟಣ್ಣ ಹಾಗೂ ಶಂಕರ್‌ನಾಗ್ ಚಿತ್ರಮಂದಿರಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಉ) ಇವುಗಳಿಂದ ಉತ್ಪತ್ತಿಯಾಗುವ ಆದಾಯವೆಷ್ಟು; (ವಿವರ ನೀಡುವುದು) ಇವುಗಳನ್ನು ಖಾಸಗೀಯವರಿಗೆ ವಹಿಸಲು ಸರ್ಕಾರದ ಸಿದ್ಧತೆ ನಡೆಸಿದೆಯೇ; ಹೇಗೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಬೆಂಗಳೂರು ಮಹಾನಗರ ಪಾಲಿಕೆ ಅಧೀನದಲ್ಲಿ (ಪುಟ್ಟಣ್ಣ ಚಿತ್ರಮಂದಿರ ಹಾಗೂ ಶಂಕರ್‌ನಾಗ್ ಚಿತ್ರಮಂದಿರ) 2 ಚಿತ್ರಮಂದಿರಗಳಿವೆ.

ಆ) ಇವುಗಳ ಅಭಿವೃದ್ಧಿ ನಿರ್ವಹಣೆಯನ್ನು ಪಾಲಿಕೆ ನೋಡಿಕೊಳ್ಳುತ್ತಿದೆ.

ಇ) ಪ್ರಸ್ತುತ ಸರ್ಕಾರಿ ಸ್ವಾಮ್ಯಯದಲ್ಲಿರುವ ಕಂಠೀರವ ಸ್ಟುಡಿಯೋವನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುತ್ತಿದೆ.

ಈ) 1. ಪುಟ್ಟಣ್ಣ ಚಿತ್ರಮಂದಿರ:– ಪುಟ್ಟಣ್ಣ ಚಿತ್ರ ಮಂದಿರವನ್ನು ಕರ್ನಾಟಕ ರಾಜ್ಯ ಚಿಲನಚಿತ್ರ ಅಭಿವೃದ್ಧಿ ನಿಗಮ ರವರಿಗೆ ಪರವಾನಗಿ ಆಧಾರದ ಮೇಲೆ ಜೂನ್ 1985 ರಂದು ಪರವಾನಗಿ ಶುಲ್ಕ ರೂ. 25,000/– ರಂತೆ ನೀಡಲಾಗಿತ್ತು. ಸದರಿ ಚಿತ್ರಮಂದಿರವನ್ನು ದಿನಾಂಕ 11.5.2004 ರಂದು ಕಾರಣಾಂತರದಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಹಿಂದಿರುಗಿಸಿರುತ್ತಾರೆ.

ಚಿತ್ರಮಂದಿರದ ಒಳಾಂಗಣ ದುರಸ್ಥಿ ಕಾರ್ಯ ಕೈಗೊಳ್ಳುವ ಸಲುವಾಗಿ M/s. Tecsok ಸಂಸ್ಥೆಯವರಿಗೆ ಚಿತ್ರಮಂದಿರ ಅಭಿವೃದ್ಧಿಪಡಿಸಲು ಮಾರ್ಗಸೂಚಿ ಹಾಗೂ ಅಂದಾಜು ಪಟ್ಟಿ ತಯಾರಿಸುವ ಕಾರ್ಯಕ್ರಮವನ್ನು ವಹಿಸಲಾಗಿದೆ.